# ಕಾಗದ ಬಂದಿದೆ ನಮ್ಮ ಕಮಲನಾಭನದು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Note:** Lyrics are same in both the reference books above. Singer has followed these wordings.

ರಾಗ: (ಮುಸಲ್ಮಾನಿ) ಗಮನಶ್ರಮ ತಾಳ: ಏಕ

ಕಾಗದ ಬಂದಿದೆ ನಮ್ಮ ಕಮಲನಾಭನದು, ಈ
ಕಾಗದವನ್ನು ಓದಿಕೊಂಡು ಕಾಲವ ಕಳೆಯಿರೊ || ಪ ||

ಕಾಮ ಕ್ರೋಧವ ಬಿಡಿರೆಂಬೊ ಕಾಗದ ಬಂದಿದೆ
ನೇಮ ನಿಷ್ಠೆಯೊಳಿರಿರೆಂಬೊ ಕಾಗದ ಬಂದಿದೆ
ತಾಮಸ ಜನರ ಕೂಡದಿರೆಂಬೋ ಕಾಗದ ಬಂದಿದೆ, ನಮ್ಮ
ಕಾಮನಯ್ಯನು ತಾನೆ ಬರೆದ ಕಾಗದ ಬಂದಿದೆ || 1 ||

ಹೆಣ್ಣಿನಾಸೆ ಬಿಡಿರೆಂಬೊ ಕಾಗದ ಬಂದಿದೆ
ಹೊನ್ನಿನಾಸೆ ಬಿಡಿರೆಂಬೊ ಕಾಗದ ಬಂದಿದೆ
ಮಣ್ಣಿನಾಸೆ ಬಿಡಿರೆಂಬೊ ಕಾಗದ ಬಂದಿದೆ, ನಮ್ಮ
ಕಮಲನಾಭನು ತಾನೆ ಬರೆದ ಕಾಗದ ಬಂದಿದೆ || 2 ||

ಗೆಜ್ಜೆ ಕಾಲ್ಕಟ್ಟಿರೆಂಬೊ ಕಾಗದ ಬಂದಿದೆ
ಹೆಜ್ಜೆ ಹೆಜ್ಜೆಗೆ ಹರಿಯೆನ್ನಿರೆಂಬೊ ಕಾಗದ ಬಂದಿದೆ
ಲಜ್ಜೆ ಬಿಟ್ಟು ಕುಣಿಯಿರೆಂಬೊ ಕಾಗದ ಬಂದಿದೆ, ನಮ್ಮ
ಪುರಂದರ ವಿಠ್ಠಲ ತಾನೆ ಬರೆದ ಕಾಗದ ಬಂದಿದೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಕಾಗದ –** ಆದೇಶ; ಶಾಸ್ತ್ರ (ಶಂಸನ, ಶಾಸನ).

**ಕಾಮನಯ್ಯನು ತಾನೆ ಬರೆದ –** ಮನ್ಮಥನ ತಂದೆಯಾದ ನಾರಾಯಣನಿಂದಲೇ ವೇದವು ಪ್ರವೃತ್ತವಾಗಿದ್ದು, ಎಲ್ಲ ಶಾಸ್ತ್ರಗಳೂ ವೇದೋಪಬೃಂಹಣಕ್ಕಾಗಿಯೇ ಇವೆ.

**ಗೆಜ್ಜೆ ಕಾಲ್ಕಟ್ಟಿರಿ –** ಹರಿಸಂಕೀರ್ತನಕ್ಕಾಗಿ.

**Classification:** Keerthane
**Ankita:** purandara vittala
**Location:** NA
**Category:** Jeevanoddhara
**Sub-Category:** kagada, padma, sittu, Narayana, Krishna, hennu, bangara, bhumi, gejje,
**Pravachana:** NA
**Explanation:** NA